ಪದಬಂಧ



**ಎಡದಿಂದ ಬಲಕ್ಕೆ**

1. ಉದ್ಯಾನದ ಆಸನಗಳೆಂದರೆ ಆಕೆಗೆ ತಿರಸ್ಕಾರ 4
3. ಆದರ ತೋರದವರನ್ನು ಕಂಡೊಡನೆ ಕೋಪದ ಕಂಪನ 3
4. ಕಣ್ಮುಚ್ಚಿ ತೆಗೆವ ಕೆಲಸ ಅತ್ಯಲ್ಪ ಕಾಲದ್ದು 3
6. ದೊರಕಿದ ಫಲದಲ್ಲಿ ಎಲ್ಲರಿಗೂ ಹೆಚ್ಚು ಕಡಿಮೆ ಇಲ್ಲದ ಭಾಗ 4
7. ಕಂತಿನ ಹಣ ಕಟ್ಟುವ ತಂತ್ರಗಾರಿಕೆ ಕುರಿತು ದೀರ್ಘ ವಿವರಣೆ 4
9. ಹೆಸರಿರುವ, ಇಲ್ಲದೆಯೂ ಇರುವ ಎಲ್ಲವೂ ಭೂಮಿಯಲ್ಲೇ ಹುಟ್ಟಿದ್ದು 4
12. ಅವನೊಡನೆ ವಿರಸಕ್ಕೆ ಆತುರವೇ ಕಾರಣ 4
14. ಮೂರ್ಖರಿಗೆ ತಿಳಿಯಲಿಲ್ಲ, ಅದು ಹಿಂದು ಮುಂದಾದ ಮೊಸಳೆ 3
15. ಇಂಥ ಭಾರೀ ಪುಸ್ತಕಗಳನ್ನು ಹೊರಲು ತಲೆಯೇ ಸರಿ 3
16. ಆ ದಂಪತಿಯರೊಳಗೊಬ್ಬ ಸೇನಾನಿಯೂ ಇದ್ದಾನೆ 4

**ಮೇಲಿನಿಂದ ಕೆಳಕ್ಕೆ**

1. ವಾರ ವಾರವೂ ತರುವಂತಾಗಲೇಬೇಕು ಒಲೆಗೆ ಇಂಧನ 4
2. ಆ ನರ್ತಕನೇ ಹಾಗೆ ; ಬಾಕಿ ವಸೂಲಿಗಾಗಿ ಬಿಡದೆ ಪೀಡಿಸುವವನ ಹಾಗೆಯೇ 4
3. ಅವರಿವರ ಧರ್ಮ ಕಾರ್ಯಗಳನ್ನೆಲ್ಲ ಟೀಕಿಸುವ ನೀಚ ಮನುಷ್ಯ 3
5. ಮನೆಯ ಕದಗಳನ್ನೇ ಮುರಿದು ಭಾರೀ ಹೋರಾಟ 3
6. ಸಂಡಿಗೆ ವ್ಯಾಪಾರ ಆರಂಭವಾದದ್ದಕ್ಕೆ ಇಂಥ ಸಂಭ್ರಮವೇ? 4
8. ಕಂಬಳಿ ಮಾರುವವನದೂ ಎಲ್ಲರಂತಹದೇ ಶರೀರ 4
10. ಸಹಕಾರ ಕೋರಿ ಬಂದವರ ಸಂಖ್ಯೆ ಹತ್ತು ನೂರು 3
11. ಹೆಣದ ಮುಂದೆ ನಿಂತಿರುವಾಗಲೂ ದುಡ್ಡಿನ ದುರಹಂಕಾರವೇ? 4
12. ಅವನ ಕಾರ್ಯವನ್ನು ಅಂತಿಮಗೊಳಿಸಲು ಸಿಕ್ಕಿದೆ ಒಪ್ಪಿಗೆ 4
13. ಎಲ್ಲ ಪುಸ್ತಕಗಳನ್ನೂ ವಿಂಗಡಿಸಿ ಮಾಡಿದ್ದು ಏಳರ ಗುಂಪು 3

## 15–12–2022 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಂಧಾನ 3. ಆರಂಭ 4. ವೀಕ್ಷಿಸು 6. ವಸನ 7. ದಟ್ಟವನ 9. ಮಾಸಕಾಲ 11. ತಿರುಗಾಟ 13. ಕಲಾವಿದ 15. ಹವನ 17. ಲವಣ 18. ಲಿಖಿಸು 19. ತೆರವು

**ಮೇಲಿನಿಂದ ಕೆಳಕ್ಕೆ**

1. ಸಂಭವ 2. ನವೀನ 3. ಆಸವ 5. ಸುಹಾಸ 7. ದಳಪತಿ 8. ನದೀತಟ 9. ಮಾನಸಿಕ 10. ಲಕ್ಷ್ಮೀಪಾದ 12.ಗಾವಿಲ 14. ಲಾಲಿಸು 15. ಹಣತೆ 16. ನಲಿವು

ಪ್ರಶ್ನಾಂಕಣ

# ಸಂರಕ್ಷಿತ ಭೂ ನೆಲ ಎಷ್ಟಿದೆ?

ವಿಶ್ವದ ಏಕೈಕ ಜೀವಲೋಕವಾಗಿರುವ ನಮ್ಮ ಭೂಮಿಯ ನೆಲಾವಾರ ಮತ್ತು ಸಾಗರಾವಾರಗಳ (ಚಿತ್ರ1) ವಿವಿಧ ಜೀವಾವಾರಗಳಲ್ಲಿ ಈವರೆಗೆ ಗುರುತಿಸಲಾಗಿರುವಂತೆ ಒಟ್ಟು 19 ಲಕ್ಷ ಜೀವಿ ಪ್ರಭೇದಗಳು ಬದುಕು ನಡೆಸಿವೆ (ಇದರ ಇನ್ನೂ ಕನಿಷ್ಠ ಐದು ಮಡಿಯಷ್ಟು ಪ್ರಭೇದಗಳು ಅಜ್ಞಾತವಾಗಿ ಅಸ್ತಿತ್ವದಲ್ಲಿವೆ ಎಂದು ತಜ್ಞರು ಅಂದಾಜಿಸಿದ್ದಾರೆ). ಇವುಗಳಲ್ಲಿ ಮನುಷ್ಯರ ಒಂದೇ ಒಂದು ಪ್ರಭೇದ (ಹೋಮೊ ಸೆಪಿಯನ್ಸ್) ಎಲ್ಲ ಜೀವಾವಾರಗಳನ್ನೂ ಅತಿಕ್ರಮಿಸಿ ಉಳಿದ ಎಲ್ಲ ಸಸ್ಯ ಮತ್ತು ಪ್ರಾಣಿ ಪ್ರಭೇದಗಳಿಗೂ ಬದುಕನ್ನು ದುಸ್ತರಗೊಳಿಸಿದೆ. ಎಷ್ಟೆಂದರೆ ಪ್ರಸ್ತುತ ಕನಿಷ್ಠ ಒಂದು ದಶಲಕ್ಷ ಜೀವಿ ಪ್ರಭೇದಗಳು ಅಳಿಯುವ ಹಾದಿ ಹಿಡಿದಿವೆ! ಇದನ್ನೆಲ್ಲ ನಿಧಾನವಾಗಿಯಾದರೂ ನಿಸರ್ಗವೇ ಸರಿಪಡಿಸಲು ಭೂ ನೆಲದ ಮತ್ತು ಕಡಲಿನಾವಾರದ ಕನಿಷ್ಠ ಶೇ. 30ರಷ್ಟಾದರೂ ಪ್ರದೇಶಗಳನ್ನು ಸಂಪೂರ್ಣ ಸಂರಕ್ಷಣೆಗೆ ಒಳಪಡಿಸಲೇಬೇಕೆಂದು ಪರಿಸರ ತಜ್ಞರು ಸರಕಾರಗಳನ್ನು ಎಚ್ಚರಿಸುತ್ತಲೇ ಇದ್ದಾರೆ. ಆದರೂ ಪ್ರಸ್ತುತದ ಸ್ಥಿತಿ ಹೇಗಿದೆ ನೀವೇ ನೋಡಿ:

- ಭೂ ನೆಲದ ಶೇ. 58 ಭಾಗ ಸಂಪೂರ್ಣ ಮನುಷ್ಯರಿಂದಲೇ ಆಕ್ರಮಗೊಂಡಿದೆ (ಚಿತ್ರ 2); ಬೇರಾವ ವನ್ಯಜೀವಿಗೂ ಅಲ್ಲಿ ಕಿಂಚಿತ್ತೂ ಸ್ಥಳವಿಲ್ಲದಂತಾಗಿದೆ. ಇನ್ನು ಶೇ. 40ರಷ್ಟು ನೆಲ ಪ್ರದೇಶ ಭಾಗಶಃ ಮನುಷ್ಯರ ಹಿಡಿತದಲ್ಲಿದ್ದು ಅದರ ಅಲ್ಪ ಸ್ವಲ್ಪ ಭಾಗಗಳು ಮಾತ್ರ ಅಲ್ಲಲ್ಲಿ ಪ್ರಕೃತಿಯ ಮಡಿಲಲ್ಲೇ ಉಳಿದಿದೆ (ಚಿತ್ರ 3). ಮಾನವರ ಹಸ್ತಕ್ಷೇಪದಿಂದ ದೂರ ಉಳಿದು ಸಂಪೂರ್ಣ ಸುರಕ್ಷಿತವಾಗಿರುವ ಭೂ ಪ್ರದೇಶದ ವಿಸ್ತಾರ ಶೇ. 14.6ರಷ್ಟು ಮಾತ್ರ!
- ಧರೆಯ ಒಟ್ಟು 195 ರಾಷ್ಟ್ರಗಳ ಪೈಕಿ 81 ರಾಷ್ಟ್ರಗಳಲ್ಲಿ ಸಂರಕ್ಷಿತ ನೆಲ ಪ್ರದೇಶ ಆಯಾ ದೇಶದ ಶೇ. 15ಕ್ಕಿಂತ ಕಡಿಮೆ ಇದೆ. 35 ರಾಷ್ಟ್ರಗಳಲ್ಲಂತೂ ಸಂರಕ್ಷಿತ ನೆಲದ ವಿಸ್ತಾರ ಶೇ. 5ಕ್ಕಿಂತ ಕಡಿಮೆ (ಅಮೆರಿಕದಲ್ಲಿ ಸಂರಕ್ಷಿತ ನೆಲಾವಾರದ ವಿಸ್ತಾರ ಶೇ. 13; ಭಾರತದಲ್ಲಿ ಶೇ. 7; ಲೆಸೋಥೊ ದೇಶದಲ್ಲಿ ಶೇ. 0.5; ಲಿಬಿಯಾದಲ್ಲಿ ಶೇ. 0.1) ಶೇ. 30ಕ್ಕಿಂತ ಹೆಚ್ಚು ಸಂರಕ್ಷಿತ ನೆಲ ಇರುವ ರಾಷ್ಟ್ರಗಳು ಕೇವಲ 26! ಇಡೀ ಪೃಥ್ವಿಯಲ್ಲಿ ಒಟ್ಟು ನೆಲದ ಶೇ. 3ರಷ್ಟು ಭಾಗ ಮಾತ್ರ ಮನುಷ್ಯರ ಒಂದೂ ಹೆಜ್ಜೆ ಗುರುತು ಇಲ್ಲದೆ ಸಂಪೂರ್ಣ ಅಕ್ಷತವಾಗಿ, ಸುರಕ್ಷಿತವಾಗಿ ಉಳಿದಿದೆ.

ಇವೇ ಪರಿಸ್ಥಿತಿಗಳು ಮುನ್ನಡೆದರೆ ಅನತಿ ಕಾಲದಲ್ಲೇ ಧರೆಯ ಇಡೀ ಜೀವಜಾಲವೇ ತೀವ್ರ ತಳಮಳಗಳ ಸಂಕಷ್ಟಗಳಿಗೆ ಸಿಲುಕಲಿದೆ ಎಂಬುದು ಸ್ಪಷ್ಟ ತಾನೇ? ಅದಕ್ಕೇ ಪರಿಸರ ತಜ್ಞರು ಜಾಗತಿಕ ಮಟ್ಟದ "30X30" ಎಂಬ ಹೆಸರಿನ ತೀವ್ರವಾದ ಒಂದು ಸಂರಕ್ಷಣಾ ಪ್ರಯತ್ನವನ್ನು ರೂಪಿಸಿದ್ದಾರೆ. 2030ರ ವೇಳೆಗೆ ಭೂ ನೆಲಾವಾರದ ಮತ್ತು ಕಡಲಿನಾವಾರದ ಶೇ. 30ರಷ್ಟಾದರೂ ಪ್ರದೇಶಗಳನ್ನು ಸಂಪೂರ್ಣ ಸಂರಕ್ಷಣೆಗೆ ಒಳಪಡಿಸುವ ಪ್ರಯತ್ನ ಅದು. ಈ ಯೋಜನೆಗೆ 112 ರಾಷ್ಟ್ರಗಳು ಈಗಾಗಲೇ ಸಹಮತ ಘೋಷಿಸಿವೆ; ಇನ್ನೂ ಹಲವಾರು ದೇಶಗಳು ಕೈಜೋಡಿಸುವ ಸಾಧ್ಯತೆ ಇದೆ. ಇಂಥ ಪ್ರಯತ್ನಗಳು ಯಶಸ್ವಿಗೊಂಡರೆ ಮಾತ್ರ ಭೂಮಿಯ ಜೀವಲೋಕ ಚೇತರಿಕೆ ಕಂಡು ಕ್ಷೇಮವಾಗಿ ಉಳಿಯುವುದು ಸಾಧ್ಯ.




■ ಎನ್. ವಾಸುದೇವ್